| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 50 + 28 = 78 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 16

Total No. of Questions : 50 + 28 = 78 ] [ Total No. of Printed Pages : 16

**ಸಂಕೇತ ಸಂಖ್ಯೆ : 01-K** **ವಿಷಯ : ಪ್ರಥಮ ಭಾಷೆ — ಕನ್ನಡ**

**Code No. : 01-K** **Subject : First Language — KANNADA**

ದಿನಾಂಕ : 21. 03. 2007 ] [ Date : 21. 03. 2007

ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-30 A.M. to 1-30 P.M.

ಪರಮಾವಧಿ ಅಂಕಗಳು : 125 ] [ Max. Marks : 125

## FOR OFFICE USE ONLY

**PART – A**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 1. | | 10. | | 19. | | 28. | | 37. | | 46. | |
| 2. | | 11. | | 20. | | 29. | | 38. | | 47. | |
| 3. | | 12. | | 21. | | 30. | | 39. | | 48. | |
| 4. | | 13. | | 22. | | 31. | | 40. | | 49. | |
| 5. | | 14. | | 23. | | 32. | | 41. | | 50. | |
| 6. | | 15. | | 24. | | 33. | | 42. | | × | |
| 7. | | 16. | | 25. | | 34. | | 43. | | × | |
| 8. | | 17. | | 26. | | 35. | | 44. | | × | |
| 9. | | 18. | | 27. | | 36. | | 45. | | × | |

*Total Marks of Part –* ***A***

**PART – B**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|---|---|
| 51. | | 56. | | 61. | | 66. | | 71. | | 76. | |
| 52. | | 57. | | 62. | | 67. | | 72. | | 77. | |
| 53. | | 58. | | 63. | | 68. | | 73. | | 78. | |
| 54. | | 59. | | 64. | | 69. | | 74. | | × | |
| 55. | | 60. | | 65. | | 70. | | 75. | | × | |

*Total Marks of Part –* ***B***

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

00100 [ Turn over

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕವು **ಎರಡು** ವಿಭಾಗಗಳನ್ನು ಹೊಂದಿದೆ. ಅವು ಎ – **ವಿಭಾಗ** ಮತ್ತು ಬಿ – **ವಿಭಾಗ.**

ii) ಎ – **ವಿಭಾಗ** 50 ಪ್ರಶ್ನೆಗಳನ್ನು ಹೊಂದಿದೆ ಮತ್ತು ಬಿ – **ವಿಭಾಗ** 28 ಪ್ರಶ್ನೆಗಳನ್ನು ಹೊಂದಿದೆ.

iii) ಈ ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲೇ ಉತ್ತರಿಸಲು ಸ್ಥಳಾವಕಾಶ ಮಾಡಲಾಗಿದೆ.

iv) ಎ – **ವಿಭಾಗದಲ್ಲಿರುವ** ಸೂಚನೆಗಳನ್ನು ಅನುಸರಿಸಿ ಮತ್ತು ಪ್ರಶ್ನೆ ಸಹಿತ ಉತ್ತರ ಪುಸ್ತಕದಲ್ಲಿ ನಾಲ್ಕು ಪರ್ಯಾಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ.

v) ಬಿ – **ವಿಭಾಗದ** ಪ್ರತಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

## ಎ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಬರೆಯಿರಿ : $50 \times 1 = 50$

1. 'ನಮ್ಮ ಭಾಷೆ' ಗದ್ಯ ಭಾಗದ ಆಕರ ಗ್ರಂಥ

(ಎ) ಕನ್ನಡ ಸಾಹಿತ್ಯ ಚರಿತ್ರೆ (ಬಿ) ಜಾತಕ ತಿಲಕಂ

(ಸಿ) ಕನ್ನಡ ಸಂಸ್ಕೃತಿ (ಡಿ) ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ

*ಉತ್ತರ :* ______

2. ಎಂ. ಮರಿಯಪ್ಪ ಭಟ್ಟರ ಕಾಲ

(ಎ) ಕ್ರಿ.ಶ. 1906 (ಬಿ) ಕ್ರಿ.ಶ. 1904

(ಸಿ) ಕ್ರಿ.ಶ. 1896 (ಡಿ) ಕ್ರಿ.ಶ. 1902

*ಉತ್ತರ :* ______

3. ನಯಸೇನನು ನಕ್ಕ ನಗು

(ಎ) ಮೂದಲಿಕೆ ನಗೆ (ಬಿ) ಸರಸ ನಗೆ

(ಸಿ) ರಸ ನಗೆ (ಡಿ) ಮುಗ್ದ ನಗೆ

*ಉತ್ತರ :* ______

4. ನಿರ್ವಾಣ – ಈ ಪದದ ಅರ್ಥ

(ಎ) ಮೋಕ್ಷ (ಬಿ) ದಾಸ್ಯ

(ಸಿ) ಬಂಧನ (ಡಿ) ಮೋಹ

*ಉತ್ತರ :* ______

5. ಗೌರಿಯ ತಾಯಿ ಗರೇಗುಡ್ಡದಲ್ಲಿ ಇದರ ಬಾಯಿಗೆ ತುತ್ತಾದಳು :

(ಎ) ನರಿ (ಬಿ) ಹುಲಿ

(ಸಿ) ಸಿಂಹ (ಡಿ) ಕಿರುಬ

*ಉತ್ತರ :* ______

6. 'ತ್ಯಾಗಮಯಿ' ಪಾಠದ ಕರ್ತೃ

(ಎ) ಎಚ್.ಜೆ. ಲಕ್ಕಪ್ಪಗೌಡರು (ಬಿ) ಚಂದ್ರಶೇಖರ ಕಂಬಾರ

(ಸಿ) ಕೆ.ವಿ. ಪುಟ್ಟಪ್ಪನವರು (ಡಿ) ಪ್ರಭುಶಂಕರ್‌ರವರು

*ಉತ್ತರ :* ______________________

7. ವೆಂಕಟಸುಬ್ಬಯ್ಯನವರು ಅಲಂಕರಿಸಿದ್ದ ಹುದ್ದೆ

(ಎ) ಹೆಡ್‌ಮೇಷ್ಟ್ರು (ಬಿ) ಮೇಷ್ಟ್ರು

(ಸಿ) ಸಾಹೇಬರು (ಡಿ) ಗುಮಾಸ್ತರು

*ಉತ್ತರ :* ______________________

8. ಶಾಲೆಯಲ್ಲಿ ದಾಖಲಿಸದ ಮಕ್ಕಳು ಯಾರವು ?

(ಎ) ಮೇಷ್ಟ್ರ ಮಕ್ಕಳು (ಬಿ) ಊರಿನ ಮಕ್ಕಳು

(ಸಿ) ಗೌಡರ ಮಕ್ಕಳು (ಡಿ) ಇತರೆ ಮಕ್ಕಳು

*ಉತ್ತರ :* ______________________

9. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ದೀರ್ಘ ಸ್ವರಗಳ ಸಂಖ್ಯೆ

(ಎ) 13 (ಬಿ) 6

(ಸಿ) 7 (ಡಿ) 2

*ಉತ್ತರ :* ______________________

10. ಸಿರಿಗನ್ನಡ ಪದವು ಈ ಸಂಧಿಗೆ ಉದಾಹರಣೆಯಾಗಿದೆ :

(ಎ) ಲೋಹ (ಬಿ) ಆಗಮ

(ಸಿ) ಗುಣ (ಡಿ) ಆದೇಶ

*ಉತ್ತರ :* ______________________

11. ಇವುಗಳಲ್ಲಿ ಸರ್ವನಾಮ ಪದ ಯಾವುದು ?

(ಎ) ಏಕಾಕ್ಷ (ಬಿ) ಕೂಡಲಸಂಗಮ

(ಸಿ) ನಾನು (ಡಿ) ಮೂರು

*ಉತ್ತರ :* ______________________

12. ಹಳಗನ್ನಡ ದ್ವಿತೀಯ ವಿಭಕ್ತಿ ಪ್ರತ್ಯಯ

(ಎ) ಇಂ (ಬಿ) ಅಂ

(ಸಿ) ಮ್ (ಡಿ) ಅತ್ತಣಿಂ

*ಉತ್ತರ :* ______________________

13. ಮಕ್ಕಳು ಹಾಲನ್ನು ಕುಡಿಯುತ್ತಾರೆ, ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿಲ್ಲ. ಇದು

(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರ ವಾಕ್ಯ (ಡಿ) ಪರಿವರ್ತಿತ ವಾಕ್ಯ

*ಉತ್ತರ :* ______________________

14. “ ” ಇದು ಯಾವ ಲೇಖನ ಚಿಹ್ನೆ ?

(ಎ) ಉದ್ಧರಣ (ಬಿ) ಪ್ರಶ್ನಾರ್ಥಕ

(ಸಿ) ಅರ್ಧವಿರಾಮ (ಡಿ) ಆವರಣ ಚಿಹ್ನೆ

*ಉತ್ತರ :* ______________________

15. 'ಅಂಜಿಕೆ' ಇದು ಯಾವ ಕೃದಂತಕ್ಕೆ ಉದಾಹರಣೆ ?

(ಎ) ನಿಷೇಧ ಕೃದಂತ (ಬಿ) ವರ್ತಮಾನ ಕೃದಂತ

(ಸಿ) ಕೃದಂತ ಭಾವನಾಮ (ಡಿ) ಕೃದಂತಾವ್ಯಯ

*ಉತ್ತರ :* ______________________

16. ಕನಕದಾಸರ ಅಂಕಿತ

(ಎ) ಕಾಗಿನೆಲೆ ಆದಿಕೇಶವ (ಬಿ) ಗೋಪಾಲ ವಿಠಲ

(ಸಿ) ಪುರಂದರ ವಿಠಲ (ಡಿ) ಹರಿದಾಸಪ್ರಿಯ

*ಉತ್ತರ :* ______________________

17. ಹರಿಯ ಪೂಜೆ ಮಾಡದವನ

(ಎ) ಅರಿವದೇತಕೆ (ಬಿ) ಶರೀರವೇತಕೆ

(ಸಿ) ಜನುಮವೇತಕೆ (ಡಿ) ಮನಸಿದೇತಕೆ

*ಉತ್ತರ :* ______________________

18. ಮರ್ತ್ಯಾವಳಿಗೆ ಮಾತೆ ಯಾರು ?

(ಎ) ಲಕ್ಷ್ಮಿ (ಬಿ) ದೇವೇಂದ್ರ

(ಸಿ) ಗೋವು (ಡಿ) ಆಕಾಶ

*ಉತ್ತರ :* ______________________

19. ನಮ್ಮ ಜನಪದರು ಬೆಳಗಾಗಿ ಎದ್ದು ಯಾರನ್ನು ನೆನೆಯಲು ಹೇಳಿದ್ದಾರೆ ?

(ಎ) ತಂದೆ (ಬಿ) ತಾಯಿ

(ಸಿ) ದೇವರು (ಡಿ) ಭೂಮಿತಾಯಿ

*ಉತ್ತರ :* ______________________

20. ಅರ್ಜುನನು ತನ್ನನ್ನು ಹೀಗೆಂದು ಕರೆದುಕೊಂಡಿದ್ದಾನೆ :

(ಎ) ಪಾರ್ಥ (ಬಿ) ಮಧ್ಯಮ ಪಾಂಡವ

(ಸಿ) ಛಲದಂಕ (ಡಿ) ವೀರ

*ಉತ್ತರ :* ______________________

21. ಇವುಗಳಲ್ಲಿ ಯಾವುದಕ್ಕೆ ಹುಳಿನೀರ ನೆರೆಯಲಾಗಿದೆ ?

(ಎ) ಹಲಸು (ಬಿ) ಬಾಳೆ

(ಸಿ) ಕಬ್ಬು (ಡಿ) ಈಳೆ

ಉತ್ತರ : ______

22. ಅಕ್ಕಮಹಾದೇವಿಯ ಅಂಕಿತ

(ಎ) ಚನ್ನಮಲ್ಲಿಕಾರ್ಜುನ (ಬಿ) ಅಜಗಣ್ಣ ತಂದೆ

(ಸಿ) ಕೂಡಲಸಂಗಮದೇವ (ಡಿ) ಗುಹೇಶ್ವರ

ಉತ್ತರ : ______

23. 'ಉರಗ ಪತಾಕೆ'ಯನ್ನು ಹೊಂದಿದ್ದವನು

(ಎ) ದುರ್ಯೋಧನ (ಬಿ) ಧರ್ಮರಾಯ

(ಸಿ) ಅರ್ಜುನ (ಡಿ) ದ್ರೋಣ

ಉತ್ತರ : ______

24. ಕವಿ ರನ್ನನಿಗಿದ್ದ ಬಿರುದು

(ಎ) ಕವಿಚಕ್ರವರ್ತಿ (ಬಿ) ಉಭಯಕವಿ ಕಮಲಕವಿ

(ಸಿ) ಆದಿಕವಿ (ಡಿ) ಉಪಮಾಲೋಲ

ಉತ್ತರ : ______

25. ಕವಿರಾಜಮಾರ್ಗ ಒಂದು

(ಎ) ಮಹಾಕಾವ್ಯ (ಬಿ) ಅಲಂಕಾರ ಗ್ರಂಥ

(ಸಿ) ಶಾಸನ (ಡಿ) ಕಥಾ ಸಂಕಲನ

ಉತ್ತರ : ______

26. ವಾಲ್ಮೀಕಿಯು ಭಾರತದ ಈ ಭಾಗದವನು :

(ಎ) ಮೂಡಣ (ಬಿ) ಪಡುವಣ

(ಸಿ) ತೆಂಕಣ (ಡಿ) ಬಡಗಣ

ಉತ್ತರ : ______

27. ಸೇಡಿಯಾಪು ಕೃಷ್ಣಭಟ್ಟರ ಜನ್ಮಸ್ಥಳ

(ಎ) ಸೇಡಿಯಾಪು (ಬಿ) ಪುತ್ತೂರು

(ಸಿ) ದಕ್ಷಿಣ ಕನ್ನಡ (ಡಿ) ಉತ್ತರ ಕನ್ನಡ

ಉತ್ತರ : ______

28. ಪುಲಿಗೆರೆ ಸೋಮನಾಥನ ಅಂಕಿತ ಯಾವುದು ?

(ಎ) ಚನ್ನಮಲ್ಲಿಕಾರ್ಜುನ (ಬಿ) ಸರ್ವಜ್ಞ

(ಸಿ) ಹರಹರ ಶ್ರೀಚನ್ನಸೋಮೇಶ್ವರಾ (ಡಿ) ಕೂಡಲಸಂಗಮ

*ಉತ್ತರ :* ________________________

29. ಗಂಧ ಕುಸುಮಗಳಿಂದ ಕೂಡಿರುವುದು

(ಎ) ಅರುಣಾಚಲ (ಬಿ) ಸ್ವರಾಚಲ

(ಸಿ) ಹಿಮಾಚಲ (ಡಿ) ಬಲಾಬಲ

*ಉತ್ತರ :* ________________________

30. ಎಂ. ಶೇಷಾದ್ರಿಯವರು ಶಿವಮೊಗ್ಗ ಜಿಲ್ಲೆಯಲ್ಲಿ ಅಲಂಕರಿಸಿದ್ದ ಹುದ್ದೆ

(ಎ) ಕಾಂಗ್ರೆಸ್ ಕಾರ್ಯದರ್ಶಿ (ಬಿ) ಪೊಲೀಸ್ ಮುಖ್ಯಾಧಿಕಾರಿ

(ಸಿ) ಜಿಲ್ಲಾಧಿಕಾರಿ (ಡಿ) ಶಿಕ್ಷಣಾಧಿಕಾರಿ

*ಉತ್ತರ :* ________________________

31. ಶಕ್ತಿಯೇ ಜೀವನ, ದುರ್ಬಲತೆಯೆ

(ಎ) ಹರಣ (ಬಿ) ಮರಣ

(ಸಿ) ಮಾರಣ (ಡಿ) ತೋರಣ

*ಉತ್ತರ :* ________________________

32. ದೇವರು ನಮ್ಮ ತಪ್ಪುಗಳನ್ನು ಕ್ಷಮಿಸಿಯಾನು ?
ಆದರೆ ನಮ್ಮ ನರಮಂಡಲ ಕ್ಷಮಿಸಲಾರದು. ಹೀಗೆಂದವರು

(ಎ) ವಿಲಿಯಂ ಜೇಮ್ಸ್ (ಬಿ) ವಿವೇಕಾನಂದ

(ಸಿ) ಗಾಂಧೀಜಿ (ಡಿ) ಪರಮಹಂಸ

*ಉತ್ತರ :* ________________________

33. ಯೋಧರ ಸಾಹಸವನ್ನು ಮೆಚ್ಚಿ ನೀಡುವ ಪ್ರಶಸ್ತಿ

(ಎ) ರಾಷ್ಟ್ರ ಪ್ರಶಸ್ತಿ (ಬಿ) ಪದ್ಮಭೂಷಣ

(ಸಿ) ಅರ್ಜುನ ಪ್ರಶಸ್ತಿ (ಡಿ) ಪರಮವೀರ ಚಕ್ರ

*ಉತ್ತರ :* ________________________

34. ಪಶುಲೋಮನ ಪರಮ ಮಿತ್ರ

(ಎ) ವಿಷ್ಣುದಾಸ (ಬಿ) ಚಂದನದಾಸ

(ಸಿ) ರಾಕ್ಷಸ (ಡಿ) ಚಾಣಕ್ಯ

*ಉತ್ತರ :* ________________________

35. ದುರ್ಗಸಿಂಹ ರಚಿಸಿದ ಕೃತಿ

(ಎ) ಗಧಾಯುದ್ಧ (ಬಿ) ನೀತಿ ಕಥೆ

(ಸಿ) ಪಂಚತಂತ್ರ (ಡಿ) ವಡ್ಡಾರಾಧನೆ

*ಉತ್ತರ :* ________________________

36. ಚಂಪಕಮಾಲಾ ವೃತ್ತದಲ್ಲಿರುವ ಗಣಗಳ ಸಂಖ್ಯೆ

(ಎ) 7 ಗಣ (ಬಿ) 6 ಗಣ

(ಸಿ) 5 ಗಣ (ಡಿ) 4 ಗಣ

*ಉತ್ತರ :* ______________________

37. 'ಕಜ್ಜ' – ಈ ಪದದ ತದ್ಭವ ರೂಪ

(ಎ) ಕಾರ್ಯ (ಬಿ) ಕಾವ್ಯ

(ಸಿ) ಕವಿ (ಡಿ) ಉದ್ಯೋಗ

*ಉತ್ತರ :* ______________________

38. ಅರಮನೆ – ಇದು ಯಾವ ಸಮಾಸಕ್ಕೆ ಉದಾಹರಣೆ ?

(ಎ) ತತ್ಪುರುಷ (ಬಿ) ಕರ್ಮಧಾರೆಯ

(ಸಿ) ದ್ವಿಗು (ಡಿ) ಕ್ರಿಯಾ

*ಉತ್ತರ :* ______________________

39. ಬ್ಯಾಸರ – ಈ ಪದದ ಗ್ರಂಥ ರೂಪ

(ಎ) ಬೇಸರ (ಬಿ) ಬೆಸರ

(ಸಿ) ಬೇಸಿಗೆ (ಡಿ) ಬೇಡ

*ಉತ್ತರ :* ______________________

40. 'ಬಟಾಟೆ' ಪದವು ಈ ಭಾಷೆಯಿಂದ ಬಂದಿದೆ :

(ಎ) ಪೋರ್ಚುಗೀಸ್ (ಬಿ) ಪರ್ಷಿಯನ್

(ಸಿ) ಸಂಸ್ಕೃತ (ಡಿ) ಕನ್ನಡ

*ಉತ್ತರ :* ______________________

41. ಚಲದಂಕನೊಳ್ ಪದದ ಹೊಸಗನ್ನಡ ರೂಪ

(ಎ) ಚಲದಂಕನಲ್ಲಿ (ಬಿ) ಚಲದಂಕನಿಂದ

(ಸಿ) ಚಲದಂಕನ (ಡಿ) ಚಲದಂಕನು

*ಉತ್ತರ :* ______________________

42. ಕರ್ನಾಟಕ ಭಾರತ ಕಥಾಮಂಜರಿ ಕಾವ್ಯ ಈ ಛಂದಸ್ಸಿನಲ್ಲಿದೆ :

(ಎ) ಭಾಮಿನಿ (ಬಿ) ವಾರ್ಧಕ

(ಸಿ) ಭೋಗ (ಡಿ) ಪರಿವರ್ಧಿನಿ

*ಉತ್ತರ :* ______________________

43. 'ಹೃದಯ ಶಾರದೆ' ಇಲ್ಲಿರುವ ಅಲಂಕಾರ

(ಎ) ಉಪಮಾ (ಬಿ) ರೂಪಕ

(ಸಿ) ಶ್ಲೇಷ (ಡಿ) ದೃಷ್ಟಾಂತ

*ಉತ್ತರ :* ______________________

44. ಹೇಳುಹೇಳು – ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಅನುಕರಣಾವ್ಯಯ (ಡಿ) ಪಡೆನುಡಿ

*ಉತ್ತರ :* ______________________________

45. ತದ್ಧಿತಾಂತ ನಾಮಕ್ಕೆ ಉದಾಹರಣೆ

(ಎ) ಕನ್ನಡಿಗ (ಬಿ) ಚಿಕ್ಕದು

(ಸಿ) ಚಿಕ್ಕವಳು (ಡಿ) ಜಾಣ

*ಉತ್ತರ :* ______________________________

46. ಬೆಂಕಿಯಲ್ಲಿ ಬಿದ್ದವನಿಗೆ ಇದು ಖಚಿತ :

(ಎ) ದುಃಖ (ಬಿ) ನೋವು

(ಸಿ) ಸಾವು (ಡಿ) ಸಂತೋಷ

*ಉತ್ತರ :* ______________________________

47. ಬುದ್ಧನು ಅಂಗುಲೀಮಾಲನಿಗೆ ಕಿತ್ತೆಸೆಯಲು ಹೇಳಿದ್ದು

(ಎ) ಅಂಗುಲೀ ಮಾಲೆಯನ್ನು (ಬಿ) ಹೆಬ್ಬೆರಳನ್ನು

(ಸಿ) ಮಕುಟವನ್ನು (ಡಿ) ಆಯುಧವನ್ನು

*ಉತ್ತರ :* ______________________________

48. ಅನ್ವರ್ಥ ನಾಮಕ್ಕೆ ಉದಾಹರಣೆ

(ಎ) ರಾಮ (ಬಿ) ಕುಂಟ

(ಸಿ) ನದಿ (ಡಿ) ಪುಸ್ತಕ

*ಉತ್ತರ :* ______________________________

49. ವೃತ್ತದಲ್ಲಿ ಎಷ್ಟು ಪಾದಗಳಿರುತ್ತವೆ ?

(ಎ) ಒಂದು ಪಾದ (ಬಿ) ಮೂರು ಪಾದ

(ಸಿ) ನಾಲ್ಕು ಪಾದ (ಡಿ) ಆರು ಪಾದ

*ಉತ್ತರ :* ______________________________

50. ಹೊಸ ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದ ದಿನಾಂಕ

(ಎ) 1. 11. 1973 (ಬಿ) 26. 1. 1950

(ಸಿ) 1. 11. 1956 (ಡಿ) 1. 11. 1974

*ಉತ್ತರ :* ______________________________

## ಬಿ – ವಿಭಾಗ

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 10 × 2 = 20

51. ನಕ್ಕಾಗ ಮುಖದಲ್ಲಾಗುವ ಬದಲಾವಣೆ ಏನು ?

52. ಬುದ್ಧನ ಅಪ್ಪುಗೆಯ ಸುಖವನ್ನು ಅನುಭವಿಸಿದ ಅಂಗುಲೀಮಾಲ ತನ್ನಲ್ಲೇ ಏನೆಂದು ಹೇಳಿಕೊಂಡ ?

53. ಗೌರಿ ಸಿದ್ದೇಗೌಡರನ್ನು ಉಳಿಸಿದ ಒಂದು ಪ್ರಸಂಗವನ್ನು ಕುರಿತು ಬರೆಯಿರಿ.

54. ರಂಗಣ್ಣನವರು ವೆಂಕಣ್ಣ ಮೇಷ್ಟ್ರನ್ನು ಯಾವ ಮಾತುಗಳಿಂದ ಸಮಾಧಾನಪಡಿಸಿದರು ?

55. ಕಾಲೇಜು ಬಿಡುವಿನ ಸಮಯದಲ್ಲಿ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಪ್ರಮುಖ ಗ್ರಂಥಗಳಾವುವು ?

56. ವಿಷ್ಣುದಾಸನ ಬುದ್ಧಿಪೂರ್ವಕ ಮರಣಕ್ಕೆ ಕಾರಣವೇನು ?

57. ಕವಿ ಯಾರನ್ನು ಭಾರತವೆಂಬ ಬೋಧಿ ವೃಕ್ಷದ ಕೊಂಬೆಗಳೆಂದು ಬಣ್ಣಿಸಿದ್ದಾರೆ ?

58. ಮನದ ಉದ್ವೇಗವನ್ನು ನಿಯಂತ್ರಿಸಲು ಏನು ಮಾಡಬೇಕು ?

59. ಹಲ್ಲಣ, ಬೆಲ್ಲ ಸೊಲ್ಲಿಗೆಗಳ ವಿಚಾರದಲ್ಲಿ ಗೋಪಾಲದಾಸರ ಅಭಿಪ್ರಾಯವೇನು ?

60. ಕಪ್ಪೆ ಅರೆಭಟ್ಟನ ಪ್ರಕಾರ ಕನ್ನಡಿಗರು ಎಂಥವರು ?

ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : 8 × 2 = 16

61. 'ನಾಪೇಳ್ವ ಕಜ್ಜವದು ಸಾಧ್ಯವೆ ನಿನಗೆ'.

62. 'ಏನೋ ಪ್ರಮಾದ ಬಂದಂತೆ ತೋರುತ್ತಿದೆ.'

63. ‘ಸಿಂಹಮನಿಲ್ಲಿಯೆ ಕೊಲಲುಂ ಗೆಲಲುಂ ಸಾಲ್ಗುಂ’

64. ‘‘ನಿಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವವರು ನೀವೇ.’’

65. ‘‘ಕಾಕಾಳಿಯೇಂ ಮೀಯದೆ.’’

66. ‘‘ಕರುಳ ಬಳ್ಳಿಯ ಬಂಧವೇ ಎಲ್ಲ.’’

67. ‘‘ಹಬ್ಬಲೆ ಅವರ ರಸಬಳ್ಳಿ.’’

68. ‘‘ಇದು ಪಾಂಚಾಲಿ ಪ್ರಪಂಚಕ್ಕೆ.’’

69. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3

ನಿಂದ್ಯನಾವನು ಲೋಕದೊಳಗಭಿ

ವಂದ್ಯನಾವನು ಜೀವವಿರ ಮೃತ

ನಂದಡಾವನು ದೇಶಕಳಿವಹುದಾರ ದೆಸೆಯಿಂದ.

70. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಸಮನ್ವಯಗೊಳಿಸಿ : 1 × 3 = 3
ಅಳುವ ಕಂದನ ತುಟಿಯು ಹವಳದ ಕುಡಿಯಂಗ.

71. ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆಯನ್ನು ವಿಸ್ತರಿಸಿ ಬರೆಯಿರಿ : 1 × 3 = 3
— ತಾಳಿದವನು ಬಾಳಿಯಾನು
— ಹಾಸಿಗೆ ಇದ್ದಷ್ಟು ಕಾಲುಚಾಚು
— ಕಾಯಕವೇ ಕೈಲಾಸ

72. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 4 = 4

ಗಗನವಬುಧಿಗೆ ಸರಿ ಸರೋವರ

______________________________

______________________________

______________________________

______________________________

______________________________

ಸೊಗಸಿ ತಲೆದೂಗಿದನು ಮಗುಳಿಂತೆಂದನಾ ಖಚರ.

ಅಥವಾ

ವಿಪಿನಚರ ______________________________

______________________________

______________________________

______________________________ಬಲ್ಲರ್.

73. ಕೆಳಗಿನ ಪದ್ಯಭಾಗದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ : 1 × 4 = 4

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿ ಸ
ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗಿಂಬುಕೆಯ್ ನಂಬಿರ
ರ್ಗೆರೆ ವಟ್ಟಾಗಿರು ಶಿಷ್ಯರಂ ಪೊರೆ ಎನುತ್ತಿಂತೆಲ್ಲಮಂ ಮಿಂತೆ ತಾ
ನೆರೆದಳ್ ಪಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ.

______________________________

______________________________

______________________________

______________________________

______________________________

______________________________

______________________________

______________________________

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಕನ್ನಡ ಭಾಷೆ ಸಮೃದ್ಧವಾಗಿ ರೂಪುಗೊಂಡ ಬಗೆ ಹೇಗೆ ?

— ಗುರು ಬಚ್ಚನ್ ಸಿಂಗ್‌ನ ಸಾಹಸವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

— ಮೇಷ್ಟ್ರು ತನ್ನ ಹೆಂಡತಿ ಬಗೆಗೆ ಹೇಳಿದ ಒಳ್ಳೆಯ ಮಾತುಗಳನ್ನು ಸಂಗ್ರಹವಾಗಿ ಬರೆಯಿರಿ.

74.

75.

76. ಕೆಳಗಿನ ಪ್ರಶ್ನೆಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4

— ಪಾಂಡವರು ಸರೋವರದ ಬಳಿಗೆ ಬರಲು ಕಾರಣವಾದ ಪ್ರಸಂಗವನ್ನು ವಿವರಿಸಿ.

ಅಥವಾ

— ನಗುವಿನ ಮಹತ್ವವನ್ನು ಡಿ.ವಿ.ಜಿ.ಯವರ ಆಶಯದಂತೆ ಬರೆಯಿರಿ.

77. — ನಿಮ್ಮ S.S.L.C. ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ, ದಾವಣಗೆರೆಯಲ್ಲಿರುವ ನಿಮ್ಮ ತಂದೆಯವರಿಗೊಂದು ಪತ್ರ ಬರೆಯಿರಿ. 1 × 5 = 5

ಅಥವಾ

— ''ಸುವರ್ಣ ಕರ್ನಾಟಕ ವರ್ಷ''ದಲ್ಲಿ ಕನ್ನಡವನ್ನು 'ಸುವರ್ಣ ಭಾಷೆ' ಎಂದು ಘೋಷಿಸುವಂತೆ ಕೋರಿ ಮುಖ್ಯಮಂತ್ರಿಗಳಿಗೊಂದು ಪತ್ರ ಬರೆಯಿರಿ.

78. ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದಕ್ಕೆ** ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ನನಗಿಂತ ಭಾಷೆ ದೊಡ್ಡದು

— ಶಾಲಾ ಬಾಲಕಿಯರಿಗೆ ಸೈಕಲ್ ವಿತರಣೆ ಕಾರ್ಯಕ್ರಮ

— ರಾಷ್ಟ್ರೀಯ ಹಬ್ಬಗಳು - ಆಚರಣೆ - ಮಹತ್ವ